ರಾಜ್ಯ ಸರ್ಕಾರದ ವತಿಯಿಂದ ಮಹಾ ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣ, ನವದೆಹಲಿ ಇವರಿಗೆ ಈ ಬಗ್ಗೆ ಶಿಫಾರಸ್ಸು ಮಾಡಲಾಗಿದೆ.

ಊ) ವಿಶ್ವವಿಖ್ಯಾತ ಗೋಳಗುಮ್ಮಟದ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ವಿಶ್ವವಿಖ್ಯಾತ ಗೋಳಗುಮ್ಮಟದ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಈ ಮುಂದಿನಂತೆ ಕ್ರಮ ಕೈಗೊಳ್ಳಲಾಗಿದೆ:

1. ಗೋಳಗುಮ್ಮಟಕ್ಕೆ ಹೊನಲು ಬೆಳಕಿನ ಸೌಲಭ್ಯವನ್ನು ಕಲ್ಪಿಸಲಾಗಿದ್ದು ಇದನ್ನು ನವೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
2. ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ.
3. ಸದರಿ ಸ್ಮಾರಕದ ಬಗ್ಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (404)208
ಮಾನ್ಯ ಸದಸ್ಯರ ಹೆಸರು : ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ)
ಉತ್ತರಿಸುವ ಸಚಿವರು : (ಸಿ.ಎಂ. ಉದಾಸಿ) ಮಾನ್ಯ ಲೋಕೋಪಯೋಗಿ ಸಚಿವರು

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ವಿವಿಧ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಮಂಜೂರಾಗಿರುವ ಸೇತುವೆಗಳು ಹಾಗೂ ಅವುಗಳ ಮೊತ್ತವೆಷ್ಟು;

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ವಿವಿಧ ಹಂತಗಳಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 4 ಸೇತುವೆಗಳು ಮಂಜೂರಾಗಿದ್ದು, ಅವುಗಳ ವಿವರ ಈ ಕೆಳಗಿನಂತಿವೆ.

ಹಂತ	ಮಂಜೂರಾದ ಸೇತುವೆಗಳ ಸಂಖ್ಯೆ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
2ನೇ ಹಂತ	2	70.00
3ನೇ ಹಂತ	1	60.00
4ನೇ ಹಂತ	1	150.00
ಒಟ್ಟು	**4**	**280.00**

ಆ) ಮಂಜೂರಾತಿ ನೀಡಿರುವ ಸೇತುವೆಗಳು ಪೂರ್ಣಗೊಂಡಿರುತ್ತವೆಯೇ;

ಒಟ್ಟು 4 ಸೇತುವೆಗಳಲ್ಲಿ 1 ಸೇತುವೆಯ ನಿರ್ಮಾಣ ಕಾರ್ಯ ಪೂರ್ಣಗೊಂಡಿರುತ್ತದೆ. ಸೇತುವೆಯ ವಿವರಗಳನ್ನು ಲಗತ್ತಿಸಲಾಗಿದೆ.

ಇ) ಪೂರ್ಣಗೊಂಡಿರದಿದ್ದಲ್ಲಿ ಕಾರಣಗಳೇನು ಹಾಗೂ ತಾಲ್ಲೂಕಿನಲ್ಲಿ ತುರ್ತು ಬೇಕಾಗಿರುವ ಸೇತುವೆಗಳನ್ನು ನಿರ್ಮಿಸಲು ಸರ್ಕಾರ ಕೂಡಲೇ ಮಂಜೂರಾತಿ ನೀಡುವುದೇ?

ಎರಡನೇ ಹಂತದಲ್ಲಿ ತೆಗೆದುಕೊಂಡ 2 ಸೇತುವೆಗಳಲ್ಲಿ 1 ಸೇತುವೆ ನಿರ್ಮಾಣ ಪೂರ್ತಿಗೊಂಡಿದ್ದು, ಇನ್ನೊಂದು ಸೇತುವೆಯ ಕಾಮಗಾರಿಗೆ ಸ್ಥಳೀಯರು ತಡೆಯೊಡ್ಡಿದ್ದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಮೂರನೇ ಹಂತದಲ್ಲಿ ತೆಗೆದುಕೊಂಡ 1 ಸೇತುವೆ ಕಾಮಗಾರಿಯ ಸರ್ವೆ, ಮಣ್ಣಿನ ಪರೀಕ್ಷೆ ಮುಗಿದಿದ್ದು, ವಿನ್ಯಾಸ ಮತ್ತು ಅಂದಾಜು ಪಟ್ಟಿ ತಯಾರಿಕೆ ಪ್ರಗತಿಯಲ್ಲಿದೆ. ನಾಲ್ಕನೇ ಹಂತದಲ್ಲಿ ತೆಗೆದುಕೊಂಡ 1 ಸೇತುವೆ ಕಾಮಗಾರಿಯ ಸರ್ವೆ ಹಾಗೂ ಮಣ್ಣಿನ ಪರೀಕ್ಷೆಯೂ ಮುಗಿದಿದ್ದು, ವಿನ್ಯಾಸ ಮತ್ತು ಅಂದಾಜು ಪಟ್ಟಿ ತಯಾರಿಕೆ ಪ್ರಗತಿಯಲ್ಲಿದೆ.

ಈ ಸೇತುವೆಗಳಲ್ಲದೆ ಬೇರೆ ಸೇತುವೆಗಳ ಕಾಮಗಾರಿ ಕೈಗೊಳ್ಳುವ ಬಗ್ಗೆ ಸದ್ಯದಲ್ಲಿ ಯಾವುದೇ ಪ್ರಸ್ತಾವ ಇರುವುದಿಲ್ಲ.

List of bridges taken by KRDCL in Kundagol Taluk.
Annexure

Sl. No.	Name of the work	Estimated amount (Rs. in lakh)	Remarks
	II Phase		
1.	Construction of bridge on Hubli-Kundagol road via Bindal at km.8.04		Work completed
2.	Construction of bridge on Hubli-Kundagol road via Bindal at km.11.06	70.00	Work put on hold due to obstructions from people.
	III Phase		
3.	Construction of bridge on Kundagol-Ramankoppa road at km.13.00	60.00	Soil investigation completed. Preparation of design and estimate is under progress.
4.	Construction of bridge on	150.00	Soil investigation

	Smshi-Nalavadi road at km.13.00		completed. Preparation of design and estimate is under progress.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (405)209
ಸದಸ್ಯರ ಹೆಸರು : ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ)
ಉತ್ತರಿಸುವ ಸಚಿವರು : (ಪಿ.ಎಂ. ಉದಾಸಿ) ಮಾನ್ಯ ಲೋಕೋಪಯೋಗಿ ಸಚಿವರು

ಅ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯರಗುಪ್ಪಿ – ರೊಟ್ಟಿಗವಾಡ ರಸ್ತೆಯ ಸುಧಾರಣೆಗೆ ಯಾವುದಾದರೂ ಯೋಜನೆ ಅಡಿಯಲ್ಲಿ ಮಂಜೂರಾತಿ ದೊರೆತಿದೆಯೇ?

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಯರಗುಪ್ಪಿ – ರೊಟ್ಟಿಗವಾಡ ರಸ್ತೆಯ ಸರಪಳಿ 0.00 ಕಿ.ಮೀ.ನಿಂದ 6.30ಕಿ.ಮೀ.ವರೆಗಿನ ಅಭಿವೃದ್ಧಿ ಕಾಮಗಾರಿಗೆ ನಬಾರ್ಡ್‌ನ ಆರ್‌ಐಡಿಎಫ್ –11ರ ಯೋಜನೆಯಡಿ (2005–06) 65.00 ಲಕ್ಷ ರೂ ಅಂದಾಜು ಮೊತ್ತದಲ್ಲಿ ಅನುಮೋದನೆಯಾಗಿರುತ್ತದೆ.

ಆ ಹಾಗಿದ್ದಲ್ಲಿ, ಮಂಜೂರಾದ ಮೊತ್ತದಲ್ಲಿ ರಸ್ತೆಯನ್ನು ನಿರ್ಮಿಸಲಾಗಿದೆಯೇ?

ಈ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲಾಗಿದ್ದ, 8.12 ಲಕ್ಷ ರೂ ವೆಚ್ಚ ಮಾಡಲಾಗಿತ್ತು, ಆದರೆ ಈ ರಸ್ತೆಯ ಭಾಗವನ್ನು ಒಳಗೊಂಡಂತೆ 2007–08ನೇ ಸಾಲಿನ ಪ್ರಧಾನಮಂತ್ರಿ ಗಾಮ ಸಡಕ್ ಯೋಜನೆಯಡಿ ಹಂತ–7ರಲ್ಲಿ ಕುಂದಗೋಳ ತಾಲ್ಲೂಕಿನ ಶಿರೂರದಿಂದ ಬಸಾಪುರ, ಹಿರೇನರ್ತಿ, ಯರಗುಪ್ಪಿ ಮಾರ್ಗ ರೊಟ್ಟಿಗವಾಡವರೆಗಿನ ಒಟ್ಟು 16.67 ಕಿ.ಮೀ.ಗಳ ರಸ್ತೆ ಅಭಿವೃದ್ಧಿ ಕೈಗೊಳ್ಳಲು ಜಿಲ್ಲಾ ಪಂಚಾಯತ್ ವತಿಯಿಂದ ಗುತ್ತಿಗೆ ಕರೆದಿರುವುದರಿಂದ, ಸದರಿ ರಸ್ತೆಯ ಅಭಿವೃದ್ಧಿಯನ್ನು ನಬಾರ್ಡ್ ಯೋಜನೆಯಡಿ ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ.

ಇ. ಮಂಜೂರಾತಿ ನೀಡದಿದ್ದಲ್ಲಿ ಈಗಲಾದರೂ ರಸ್ತೆ ಸುಧಾರಣೆಗೆ ಅನುದಾನ ನೀಡಲಾಗುವುದೇ?

ಮೇಲೆ ತಿಳಿಸಿರುವಂತೆ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಪಿಎಂಜಿಎಸ್‌ವೈ ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಇಲಾಖೆಯು ಗುತ್ತಿಗೆ ನಿಗದಿಪಡಿಸಲು ಕ್ರಮ ಕೈಗೊಳ್ಳುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (267)210
ಸದಸ್ಯರ ಹೆಸರು : ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್. ಯಡಿಯೂರಪ್ಪ)